**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 102/2015 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |
|---|---|---|

ಸಾಕ್ಷಿದಾರರ ಹೆಸರು : ಮನು ಎಸ್.ಜೆ
ತಂದೆಯ ಹೆಸರು : ಜವರನಾಯಕ
ವಯಸ್ಸು : 29 ವರ್ಷ
ಉದ್ಯೋಗ : ಚಾಲಕ
ವಾಸ ಸ್ಥಳ : ಸಾಕ್ಷಿಬೀಡು ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 27.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ಪಂಚನಾಮೆ ಕಾಲಕ್ಕೆ ಪೊಲೀಸರು ವಶಪಡಿಸಿಕೊಂಡ ಎರಡು ಗುದ್ದಲಿ ಕಾವುಗಳನ್ನು, ಒಂದು ಗೊದಮೊಟ್ಟೆ ತುಂಡನ್ನು ಮತ್ತು ಎರಡು ಬನಿಯನ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳು ಈಗ ನ್ಯಾಯಾಲಯದ ಮುಂದೆ ಇರುವ ವಸ್ತುಗಳಾಗಿರುತ್ತವೆ. ಸಾಕ್ಷಿ ಗುರುತಿಸಿದ ಎರಡು ಗುದ್ದಲಿ ಕಾವುಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು, ಒಂದು ಗೊದಮೊಟ್ಟೆ ತುಂಡನ್ನು ಮುದ್ದೆಮಾಲು 2 ಎಂದು ಕೆಂಪು ಬಣ್ಣದ ಸಾಂಡೋ ಬನಿಯನ್ ಅನ್ನು ಮುದ್ದೆಮಾಲು 3 ಎಂದು ಮತ್ತು ಸಿಮೆಂಟ್ ಬಣ್ಣದ ಸಾಂಡೋ ಬನಿಯನ್ ಅನ್ನು ಮುದ್ದೆಮಾಲು 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಪಿ.ಬಿ.ಎಂ ವಕೀಲರಿಂದ**

ಆರೋಪಿತರು ನನಗೆ ದಾಯಾದಿಗಳಾಗಬೇಕು. ನಮ್ಮ ಹಾಗೂ ಅರೋಪಿತರ ನಡುವೆ ಸಿವಿಲ್ ವ್ಯಾಜ್ಯ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ನಮ್ಮ ನಡುವೆ 2014 ರಿಂದ ಸದರಿ ದಾವೆ ನಡೆಯುತ್ತಿದೆ. ಸಿವಿಲ್ ದಾವೆಯನ್ನು ನಾವೇ ಹೂಡಿದ್ದೇವೆ. ಕೃತ್ಯ ನಡೆದ ಸ್ಥಳದ ಚಕ್ಕುಬಂದಿ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ದೂರನ್ನು ನಾನೇ ಸ್ವತಃ ಬರೆದಿರುತ್ತೇನೆ. ಗಲಾಟೆ ಸಮಯದಲ್ಲಿ ಶಿವೇಗೌಡ ಮತ್ತು ಪ್ರಕಾಶರವರು ಹಾಜರಿದ್ದು ಗಲಾಟೆಯನ್ನು ಬಿಡಿಸಿದರು. ಶಿವೇಗೌಡ ಮತ್ತು ಪ್ರಕಾಶರವರ ಜಮೀನು ನಮ್ಮ ಜಮೀನಿನಿಂದ ಅರ್ಧ ಕಿಮೀ ಅಂತರದಲ್ಲಿದೆ. ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಪೊಲೀಸರು ಸ್ಥಳಕ್ಕೆ ಬಂದಾಗ ಪಂಚನಾಮೆ ಕಾಲಕ್ಕೆ ನಾನೇ ನೀಡಿರುತ್ತೇನೆ. ಮುದ್ದೆಮಾಲುಗಳು ಹೊಲದಲ್ಲಿಯೇ ಇದ್ದವು. ಮುದ್ದೆಮಾಲು 1 ರಂತಹ ವಸ್ತುಗಳು ಎಲ್ಲ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಪೊಲೀಸರು ಸ್ಥಳದಲ್ಲಿ ಸಂಜೆ 5 ಗಂಟೆಯಿಂದ 5.45 ಗಂಟೆವರೆಗೆ ಇದ್ದರು. ಸ್ಥಳಕ್ಕೆ ಇಬ್ಬರು ಪೊಲೀಸರು ಬಂದಿದ್ದರು. ಮಹಜರನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಜಮೀನು ವಿಚಾರದ ದ್ವೇಷದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿರುವುದಿಲ್ಲ, ಬೈದಿರುವುದಿಲ್ಲ ಮತ್ತು ಪ್ರಾಣಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.